4. ಸೂರ್ಯ ಅಸ್ತಮಾನವಾದನಂತರ ಮತ್ತು ಸೂರ್ಯೋದಯಾತ್ಪೂರ್ವ ಯಾವ ಸ್ಥಳದಲ್ಲೂ ಜೆಕ್ಕೆಯನ್ನು ರೂಢಿಸಕೂಡದು ಮತ್ತು ರಫ್ತು ಮಾಡಕೂಡದು.

5. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟ್ಟಿನಲ್ಲಿ ಬೆಂಕಿ ಸಂಭವಿಸಿದರೆ ಇದರಿಂದ ವುಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನನ್ನೆ ಗುರಿಪಡಿಸಲ್ಪಡುತ್ತೆ.

6. ಕಂಟ್ರಾಕ್ಟುದಾರನು ಜೆಕ್ಕೆ ರೂಢಿಸುವದರಲ್ಲಿ ತಾಯಿಬೇರಿಗೆ ಜಾಖಮ ಆಗದಂತೆ ಪಕ್ಕದ ಬೇರುಗಳನ್ನೆ ಜಮಾಯಿಸಿ ಕೊಳ್ಳಬೇಕು.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಸುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ನಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟು.		ಧರ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ವೆ ಸ್ಟೇಷನ್.	28– 5–1903	30	879	7	171	3	77	3	73	5	131	ಸ್ಟೇಷನ್ ಪಕ್ಕದಲ್ಲಿ

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮುಕ್ಕಂ ನಂಬರ್ 15ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿರುವ 1895ನೇ ಇಸವಿ ಮಾರ್ಚಿ 15ನೇ ಮುಕ್ಕಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೆಲ್ 1903.

ಕೋಲಾರ ತಾಲ್ಲೂಕಿಗೆ ಕೇರಿದ ಬಾಜೂದಲ್ಲಿ ನಮೂದಿಸಿರುವ ಗ್ರಾಮಗಳನ್ನು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರ

ಕೋಲಾರ ತಾಲ್ಲೂಕು.
ಸುಗಟೂರು ಹೋಬಳಿ.
ಜೋಡಿ ಉಪ್ಪುಕುಂಟೆ—17ನೇ ಜೂನ್ 1903.
ಜೋಡಿ ಹನುಮಂತಪುರ—19ನೇ ಜೂನ್ 1903.

ರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ ಜಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 30—4—1903ನೇ ಮುಕ್ಕಂ 17ನೇ ನಂಬರ್ ಮೈಸೂರು ಗೆಜೆಟಿನ IIನೇ ಭಾಗದ 184—185ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಇನ್ಸ್ಟ್ರಾರ್.

ತಾರೀಖು 17ನೇ ಏಪ್ರೆಲ್ 1903.

ತುಮಕೂರು ಡಿಸ್ಟ್ರಿಕ್ಟು 2ನೇ ಜನರಲ್ ಅಸಿಸ್ಟೆಂಟ್ ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ ಮೊ|| ನಂ. 78.

ಫಿರ್ಯಾದಿ. ಸರ್ಕಾರ

ಅಪರಾಧಿ. ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತ್ತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮುಕ್ಕಂನಲ್ಲಿ ದೊರತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೊಲೀಸಿನವರಿಂದ ಹಾಜರಾಗಲ್ಪಟ್ಟಿತು.

ಈ ವೊಕದ್ದಮಾ ವಿಚಾರಣೆ ನಡಿಸಿದ್ದರಲ್ಲಿ ಈ ಮಾಲುಗಳನ್ನು ಸದರೀ ಬೂಸಿಗನು ನ್ಯಾಯವಾಗಿ ಸಂಪಾದಿಸಿದ್ದಲ್ಲವೆಂತಲೂ ಚೋರೀ ಮಾಲುಗಳಾಗಿರಬಹುದೆಂದು ಗುಮಾನೀ ತೋರಿಬಂದಿರುತ್ತೆ. ಆದ್ದರಿಂದ ಈ ಮಾಲುಗಳಿಗೆ ವಾರಸ್ದಾರು ಯಾರಾದರೂ ಇದ್ದಲ್ಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಆರು ತಿಂಗಳು ಒಳಗಾಗಿ ಈ ಕೋರ್ಟು ರೂಬರೂ ಹಾಜರಾಗಿ ತಮ್ಮ ವಾರಸನ್ನು ದೃಢಪಡಿಸಿಕೊಟ್ಟು ಮಾಲುಗಳನ್ನು ಪಡಿಯಬಹುದು.

ತುಮಕೂರು ಡಿ॥ 2ನೇ ಜನರಲ್ ಅ॥ ಕಮಿಷನರ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು—ಕ್ರಿಮಿನಲ್ ಮಿಸಲೀ ನಿಯಸ್ ಕೇಸ್ ನಂಬರು 8 (1901—1902).

ಈ ವೊಕದ್ದಮೇಲಿ ಕೋರ್ಟು ರೂಬರೂಬ್ ಹಾಜರಾದ ಮಾಲುಗಳ ತಪಶೀಲು ತೋರಿಸುವ ಲೀಸ್ಟು.

1	ಕಂಚಿನ ಲೋಟಾದಲ್ಲಿರುವ ನಗದು 238—0—0 ರೂ ಪಾಯಿಗಳು (ಜಾಡಿಷಲ್ ಡಿಪಾಜಿಟನಲ್ಲಿದೆ).		
2	ಚಿನ್ನದ ವಾಲೆ ಜೊತೆ	...	1
3	ಚಿನ್ನದ ತಾಳಿ ಬಟ್ಟುಗಳು	..	3
4	ಚಿನ್ನದ ಬಾವಲಿ ಜೊತೆ	..	1
5	ಬಿಳಿ ಚಿನ್ನದ ಬಾವಲಿ	..	1
6	ಚಿನ್ನದ ಮೂಗನತ್ತು	..	1
7	ಕೆಂಪುಕೆಲ್ಲು ಮೂಗನತ್ತು	....	1
8	ಹತ್ತು ಕಡಕು ಜೊತೆ	..	1
9	ಬಳ್ಳಿ ಮುರು ಜೊತೆ	..	1
10	ಚಿನ್ನದ ಸಣ್ಣಗುಂಡುಗಳು	..	152
	ಅದರಲ್ಲಿ ಗುಂಡಿನ ತಾತಿಗಳು	...	2
	ಬಿಳಿ ಹರಳ್ಳುತಾಳಿ	..	1
	ಕೆಂಪುಕಲ್ಲು ತಾಳಿ	..	1
11	ಭಂಗಾರದ ಗಂಟಿ ಜೊತೆ 3, ವಕ್ಕಲಿಗರು ಕಿವಿಗೆ ಹಾಕ ತಕ್ಕದ್ದು.		
12	ಭಂಗಾರದ ಅರೆಮುರ	...	1
13	ಭಂಗಾರದ ಜಪ್ಪುಗುಂಡು	...	1
14	ಭಂಗಾರದ ಗಿಣಿಮುರು ಮುತ್ತು ಸನೇತ		1
15	ಚಿನ್ನದ ಮುರುಗಳು	...	3
16	ಚಿನ್ನದ ತಾಳಿ ಮುರಕು	...	1
17	ಬೆಳ್ಳಿ ಮುರ	..	1
18	ಬಳ್ಳಿ ಉಂಗರ	.	1
19	ಬೆಳ್ಳಿ ಭಂಗಾರದ ತಾಳಿ	...	1
20	ನಗದು ರೂಪಾಯಿಗಳು 5, ಜಾಡಿಷಲ್ ಡಿಪಾಜಿಟನಲ್ಲಿಲ್ಲ		
21	ಸಣ್ಣತಾಂಬ್ರದಕಾಸು	..	
22	ಬೊಂಬಾಯಿ ಮುತ್ತುಗಳು	...	16
23	ಬೆಳ್ಳಿಬಾಬತು ಬೇವಿನಕಾಯಿ ತ್ರಾತಿ	..	1
24	ಬೆಳ್ಳಿ ಕರಡಿಗೆ ಬಿರಟೆದಹ		
25	ಬೆಳ್ಳಿ ಚಚ್ಚಿರತಕ್ಕ ಚವಲಿತ್ತುಂಬು	...	1
26	ಬೆಳ್ಳಿ ಸಾಬತಾ ಚವಲಿತ್ತುಂಬು	...	1
27	ಬೆಳ್ಳಿ ಛತ್ರಿ	..	1
28	ಬೆಳ್ಳಿ ನಾಗಮುರಿ	..	1
29	ಬೆಳ್ಳಿ ಮುದ್ರೆ ಉಂಗರ	..	1
30	ಬೆಳ್ಳಿ ಉಂಗರಗಳು	...	2
31	ಬೆಳ್ಳಿ ಪಾಪಟೆ ಉಂಗರ	...	1
32	ಕಾಲುಮಿಲ್ಲಾ ಜೊತೆ	....	2
33	ಬಳ್ಳಿ ಕಾಲುಸುತ್ತು	...	1
34	ಬೆಳ್ಳಿ ಸರಪಣಿಗಳು ಕೊಕ್ಕಿ ಸನೇತ	..	6
35	ಬೆಳ್ಳಿ ಚೂರುಗಳು		
36	ಬೊಂಬಾಯಿ ಮುತ್ತುಗಳು	...	21
37	ಮುಚ್ಚಳ ಸನೇತ ಇರತಕ್ಕ ತಾಂಬ್ರದ ಭರಣಿಯಲ್ಲಿ ನಗದು ಎಂಟು ರೂಪಾಯಿ (ರಾಜಾ ಪಾವಲಿಗಳು ಎರಡು)		
38	ಹವಳ, ಚಿನ್ನದ ಗುಂಡುಗಳು, ತಾಳಿ ವಗೈರೆ ಧಾರದಲ್ಲಿ ಪೋಣಿಸಿದ ಸರ ಒಂದು		
39	ಕೆಂಪು ರೇಷಮೆ ವಸ್ತ್ರ	..	1
40	ಹಿತ್ತಾಳಿ ತಾಲಿ ಒಂದು		

ಬಿ. ತಿರುಮಲಾಚಾರ್,
ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 1ನೇ ಮೇ 1903.

1. ಕಂದಾಯದ ಬಾಕೀದಾರರಾದ ಕೊಪ್ಪಾಳು ಗ್ರಾಮದ ಜೋಡಿದಾರ್ರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಕೊಪ್ಪಾಳು ಗ್ರಾಮದಲ್ಲಿ ಅಮಲ್ದಾರ್ ಅಥವಾ ಸ್ಪೆಷಲ್ ಸಬ್ ಡಿವೀಜ್ ಆಫೀಸರವರ ರೂಬರೂ 1903ನೇ ಇಸವಿ ಜೂ 13ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಷದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902-1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ವೇರಿಗೆ 237—8—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂಪಾಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.